ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಆಂದೋಲನಜೀವಿ ಅರುಣಾ

ಅರುಣಾ ರಾಯ್ ಅವರ 'ದ ಪರ್ಸನಲ್ ಇಸ್ ಪೊಲಿಟಿಕಲ್' ಪುಸ್ತಕ, ಸಮಾಜಸೇವೆ ಮಾಡುತ್ತೇವೆ ಎಂದು ಹೊರಟಿರುವ ಹಮ್ಮುಬಿಮ್ಮಿನ ಜನರ ಅಹಂಕಾರದ ಬುಗ್ಗೆಯನ್ನು ಒಡೆದು, ಸ್ವಲ್ಪಮಟ್ಟಿಗೆ ವಿನಮ್ರಭಾವವನ್ನು ಉಂಟು ಮಾಡಬಹುದು.

ದೆಹಲಿಯಲ್ಲಿ ಬೆಳೆದ, ತಮಿಳು ಭಾಷಿ ಮಹಿಳೆ. ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ. ದೆಹಲಿಯ ಇಂದ್ರಪ್ರಸ್ತ ಕಾಲೇಜಿನಲ್ಲಿ ಬೋಧಕ ವೃತ್ತಿ. ಐಎಎಸ್ ಪರೀಕ್ಷೆ ಪಾಸು ಮಾಡಿ ಏಳು ವರ್ಷಗಳ ಕಾಲ ಪುದುಚೆರಿ ಮತ್ತು ವಿವಿಧ ಕೇಂದ್ರ ಶಾಸಿತ ಪ್ರದೇಶಗಳಲ್ಲಿ ಸೇವೆ. ಈ ನಡುವೆ ರಾಜಸ್ಥಾನದ ತಿಲೋನಿಯಾಕ್ಕೆ ಹೋಗಿ ಸಮಾಜಸೇವೆಯಲ್ಲಿ ನಿರತರಾಗಿರುವ ಸಹಪಾಠಿ ಬಂಕರ್ ರಾಯ್ ಜೊತೆ ಮದುವೆ. ಒಂದು ದಿನ ಎಲ್ಲ ಸವಲತ್ತುಗಳನ್ನು ಬಿಟ್ಟು ತಿಲೋನಿಯಾಕ್ಕೆ ತೆರಳಿ, ಸಮಾಜಸೇವಾ ಸಂಪನ್ಮೂಲ ಸಂಸ್ಥೆಯ ಭಾಗವಾಗಿ ಪದಾರ್ಪಣೆ. ಕೆಲವರ್ಷಗಳ ನಂತರ ರಾಜಸಮಂದ್ ಜಿಲ್ಲೆಯ ದೇವಡುಂಗ್ರಿಯಲ್ಲಿ ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆಯ ಸ್ಥಾಪನೆ. ಮಣ್ಣಿನ ಗುಡಿಸಲಿನಲ್ಲಿ ವಾಸ. ಕನಿಷ್ಠ ವೇತನ ಕಾಯಿದೆಯಲ್ಲಿ ನಮೂದಿಸಿದಷ್ಟೇ ವೇತನ. ಜನರೊಂದಿಗೆ ಸಹಜೀವನ, ಹಕ್ಕುಗಳ ಹೋರಾಟದ ರೂವಾರಿ, ಮನರೇಗಾ ಮತ್ತು ಮಾಹಿತಿ ಹಕ್ಕು ಕಾಯಿದೆಯ ಹಿನ್ನೆಲೆಯ ಮಹತ್ವದ ವ್ಯಕ್ತಿ. ಸರ್ಕಾರದ ನೀತಿ ರೂಪಕಲ್ಪನೆಯಲ್ಲಿ ಸಕ್ರಿಯ ಪಾತ್ರಧಾರಿಯಾಗಿ ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯತ್ವ. ರಾಜೀನಾಮೆ. ನಡುವೆ ಒಂದು ಮ್ಯಾಗ್ಸೆಸೆ ಪ್ರಶಸ್ತಿ. ಹೀಗೆ ಸಮೃದ್ಧ ಜೀವನ ಜೀವಿಸಿದ ಅರುಣಾ ರಾಯ್ ತಮ್ಮ ಜೀವನದ ನೆನಪುಗಳನ್ನು ದಾಖಲಿಸಿದ್ದಾರೆ. 'ದ ಪರ್ಸನಲ್ ಇಸ್ ಪೊಲಿಟಿಕಲ್' ಎನ್ನುವ ಅವರ ಪುಸ್ತಕ ಸಮಾಜ ಸೇವೆ ಮಾಡುತ್ತೇವೆ ಎಂದು ಹೊರಟಿರುವ ಹಮ್ಮುಬಿಮ್ಮಿನ ಜನರ ಅಹಂಕಾರದ ಬುಗ್ಗೆಯನ್ನು ಒಡೆದು, ಸ್ವಲ್ಪಮಟ್ಟಿಗೆ ವಿನಮ್ರತೆಯನ್ನು ಎಲ್ಲರಲ್ಲೂ ಉಂಟು ಮಾಡುವುದರಲ್ಲಿ ಸಫಲವಾಗಬಹುದು.

ಅರುಣಾರ ಈ ಪುಸ್ತಕದಲ್ಲಿ ಯಾವ ರೀತಿಯ ಭವ್ಯತೆಯೂ ಇಲ್ಲ. ಸಾಮಾನ್ಯವಾಗಿ ಇಷ್ಟು ಸಮೃದ್ಧ ಬದುಕಿನಲ್ಲಿ, ಜನಾಂದೋಲನ ಜೀವಿಯಾಗಿ ಜನರ ಹಕ್ಕುಗಳಿಗಾಗಿ ಹೋರಾಡುವಾಗ ಅನೇಕ ರೋಚಕ ಘಟನೆಗಳು ಆಗುತ್ತವೆ. ಅನೇಕ ಬಾರಿ ನಡೆದ ಆಂದೋಲನದ ಫಲವಾಗಿ ನೀತಿಗಳು ಬದಲಾದರೆ ಅದರ ಸಾಫಲ್ಯಕ್ಕೆ ತಾವೇ ಕಾರಣೀಭೂತರೆಂದು ಬೀಗುವ ಆತ್ಮರತಿಯಿರುತ್ತದೆ. ಆದರೆ ಈ ಪುಸ್ತಕ ಯಾವುದೇ ಏರುಪೇರಿಲ್ಲದೇ ಒಂದು ಚಿಕಿತ್ಸಕ ನೋಟದಿಂದ ಘಟನೆಗಳಿಗೂ ಅಲ್ಲಿದ್ದ